ಸೃಜನಿ

SRUJANI: Indian Journal of Innovative Research and Development (SIJIRD)
Volume-2 Issue 4, September-October 2023, Pp. 121-126
Bi-Monthly, Peer-Reviewed, Open Access, Indexed Journal

I S S N: 2583-3510
SIRDF
JOURNALS
editor@srujani.in
www.srujani.in

# ಸಾಮಾಜಿಕ ಭದ್ರತೆಯ ಕಾರ್ಯಕ್ರಮಗಳ ಮೌಲ್ಯಮಾಪನ ಅಧ್ಯಯನ

**ಅಂದಾನಿ ಬಿ.**
ಸಂಶೋಧನಾ ವಿದ್ಯಾರ್ಥಿ, ಗ್ರಾಮೀಣಾಭಿವೃದ್ಧಿ ಅಧ್ಯಯನ ಕೇಂದ್ರ, ಜ್ಞಾನಭಾರತಿ, ಬೆಂಗಳೂರು ವಿಶ್ವವಿದ್ಯಾಲಯ, ಬೆಂಗಳೂರು.

***Abstract:***

*ಯಾವುದೇ ಒಂದು ದೇಶದ ಅಭಿವೃದ್ಧಿ ಎಂದರೆ ಅಲ್ಲಿನ ದುರ್ಬಲ ವರ್ಗದವರನ್ನು ಸಾಮಾಜಿಕ, ಆರ್ಥಿಕ ಹಾಗೂ ಶೈಕ್ಷಣಿಕವಾಗಿ ಮೇಲೆತ್ತುವುದೇ ಆಗಿದೆ. ಹಾಗೆಯೇ ಪ್ರತಿಯೊಬ್ಬ ಪ್ರಜೆಯ ಪ್ರಗತಿಯಿಂದಲೂ ಒಂದು ದೇಶವು ಮುಂದುವರಿದ ದೇಶವೆಂದು ಪರಿಗಣಿಸಲು ಸಾಧ್ಯವಿದೆ. ಈ ನಿಟ್ಟಿನಲ್ಲಿ ಭಾರತ ಸರ್ಕಾರವು ಮೊದಲಿನಿಂದಲೂ ಶ್ರಮಿಸುತ್ತಾ ಬಂದಿದೆ. ಇದಕ್ಕೆ ಕೇಂದ್ರ ಮತ್ತು ರಾಜ್ಯ ಸರ್ಕಾರಗಳು ಸಮಾಜ ಕಲ್ಯಾಣ ಯೋಜನೆಗಳ ಮೂಲಕ ರಾಷ್ಟ್ರದ ಅಭಿವೃದ್ಧಿಗೆ ಪ್ರಯತ್ನಿಸುತ್ತಿವೆ. ಇದೇ ರೀತಿ ರಾಜ್ಯದ ಜನತೆಯ ಸಾಮಾಜಿಕ, ಆರ್ಥಿಕ ಹಾಗೂ ಶೈಕ್ಷಣಿಕ ಸ್ಥಾನಮಾನದಲ್ಲಿ ಸಮಾನತೆಯನ್ನು ಸ್ಥಾಪಿಸುವುದು ಕರ್ನಾಟಕ ಸರ್ಕಾರದ ಮುಖ್ಯ ಧ್ಯೇಯವಾಗಿದೆ.*

***Keywords:*** *ಅಭಿವೃದ್ಧಿ ಯೋಜನೆ, ಸಾಮಾಜಿಕ ಭದ್ರತೆ, ವೃದ್ಧಾಪ್ಯ ವೇತನ, ವಿಧವಾ ವೇತನ, ಅಂಕವಿಕಲ ವೇತನ.*

### ಪೀಠಿಕೆ

ದಲಿತರು, ಹಿಂದುಳಿದವರು, ಮಹಿಳೆಯರು, ಮಕ್ಕಳು, ಕಾರ್ಮಿಕರು, ವಿಕಲಚೇತನರನ್ನು ಒಳಗೊಂಡಂತೆ ಮುಂತಾದವರ ಏಳಿಗೆಗಾಗಿ ಕೈಗೊಳ್ಳುವ ಕಾರ್ಯಕ್ರಮಗಳೆಲ್ಲವೂ ಸಮಾಜಸೇವೆಯ ವಿವಿಧ ವಿಧಾನಗಳಾಗಿವೆ. ಸರ್ಕಾರದೊಂದಿಗೆ ಖಾಸಗಿ ಸಂಸ್ಥೆಗಳು ಈ ನಿಟ್ಟಿನಲ್ಲಿ ತಮ್ಮ ಕಾರ್ಯ ಯೋಜನೆಗಳನ್ನು ರೂಪಿಸಿಕೊಂಡು, ಕರ್ನಾಟಕವನ್ನು ಸರ್ವ ಸಮಾನತೆಯುಳ್ಳ ಹಾಗೂ ಅಭಿವೃದ್ಧಿಶೀಲ ರಾಜ್ಯವನ್ನಾಗಿ ಪರಿವರ್ತಿಸಲು ಪ್ರಯತ್ನಿಸುತ್ತಿವೆ. ಸರ್ಕಾರದ ವತಿಯಿಂದ ಒದಗಿಸಲ್ಪಟ್ಟಿರುವ ಹಲವಾರು ಕಲ್ಯಾಣ ಕಾರ್ಯಕ್ರಮಗಳ ಹಾಗೂ ಅವುಗಳ ಯಶಸ್ಸು ಗಮನಾರ್ಹ. ಅಲ್ಲದೆ, ವ್ಯಕ್ತಿಗಳು ಮತ್ತು ಇತರೆ ಸ್ವಯಂ ಸೇವಾ ಸಂಸ್ಥೆಗಳೂ ಈ ಕಾರ್ಯಕ್ರಮಗಳನ್ನು ನೆರವೇರಿಸುವುದರಲ್ಲಿ ಮುಂದಾಗಿರುವುದನ್ನು ನಾವು ಕಾಣಬಹುದಾಗಿದೆ. ಜಗತ್ತಿನಲ್ಲಿ ಒಟ್ಟು ಜನಸಂಖ್ಯೆಯ 2/3 ಭಾಗದಷ್ಟು ಜನ ಗ್ರಾಮಗಳಲ್ಲಿ ವಾಸಿಸುತ್ತಾರೆ. ಭಾರತದ ಜನಸಂಖ್ಯೆಯಲ್ಲಿ ಶೇ.69 ರಷ್ಟು ಮತ್ತು ಕರ್ನಾಟಕದ ಶೇ.61 ರಷ್ಟು ಜನ ಗ್ರಾಮಗಳಲ್ಲೂ ಹಾಗೂ ಭಾರತದ ಶೇ.31 ರಷ್ಟು ಕರ್ನಾಟಕದ ಶೇ.39 ರಷ್ಟು ಜನ ನಗರಗಳಲ್ಲಿ ವಾಸ ಮಾಡುತ್ತಿದ್ದಾರೆ. ಗ್ರಾಮೀಣ ಜನರ ಜೀವನಕ್ರಮವು ನಗರ ಜನರ ಜೀವನ ಕ್ರಮಕ್ಕಿಂತ ತುಂಬಾ ಭಿನ್ನವಾಗಿರುತ್ತದೆ. ಗ್ರಾಮೀಣ ಜನರ ಆಹಾರ–ವಿಹಾರ, ಉಡುಗೆ–ತೊಡುಗೆ, ನಡೆ–ನುಡಿ, ಆಚಾರ–ವಿಚಾರ, ವರ್ತನೆ, ಅನುಕಂಪ ಇತ್ಯಾದಿ ಗ್ರಾಮೀಣ ಪರಿಸರದಿಂದ ಪ್ರಭಾವಿತವಾಗಿರುತ್ತವೆ.

***Please cite this article as:*** ಅಂದಾನಿ ಬಿ. (2023). ಸಾಮಾಜಿಕ ಭದ್ರತೆಯ ಕಾರ್ಯಕ್ರಮಗಳ ಮೌಲ್ಯಮಾಪನ ಅಧ್ಯಯನ. *ಸೃಜನಿ: ಇಂಡಿಯನ್ ಜರ್ನಲ್ ಆಫ್ ಇನ್ನೋವೇಟಿವ್ ರೀಸರ್ಚ್ ಅಂಡ್ ಡೆವಲಪ್‌ಮೆಂಟ್,* 2(4), 121–126.

ಅವರ ಆರ್ಥಿಕ ಸ್ಥಿತಿಗತಿ, ಸಾಮಾಜಿಕ ವಹಿವಾಟು, ಧಾರ್ಮಿಕ ಪರಂಪರೆಯ ವ್ಯವಸ್ಥೆ, ರಾಜಕೀಯ ಏರ್ಪಾಟು ಮುಂತಾದವುಗಳು ವಿಶಿಷ್ಟ ಸ್ವರೂಪವಾದವುಗಳಾಗಿವೆ. ಕಳೆದು ಎರಡು ದಶಕಗಳಲ್ಲಿ ಆರ್ಥಿಕ ಅಭಿವೃದ್ಧಿಯಿಂದಾಗಿ ಕಾರ್ಮಿಕರು ಕೃಷಿಯಿಂದ ಇತರೆ ವಲಯಗಳಿಗೆ ವೇಗವಾಗಿ ಬದಲಾವಣೆ ಹೊಂದುತ್ತಿದ್ದಾರೆ. ಆದ್ದರಿಂದ ಭಾರತ ಮತ್ತು ಕರ್ನಾಟಕ ಈಗಲೂ ಗ್ರಾಮೀಣ ಕೃಷಿಕ ಆರ್ಥಿಕತೆಯಲ್ಲಿರುತ್ತದೆ. ಆದ್ದರಿಂದ ಆರ್ಥಿಕ ಮತ್ತು ಮಾನವ ಅಭಿವೃದ್ಧಿಯಲ್ಲಿ ನಿಗದಿಪಡಿಸಿಕೊಂಡಿರುವ ಅಪೇಕ್ಷಿತ ಗುರಿಗಳನ್ನು ಸಾಧಿಸಲು ಗ್ರಾಮೀಣ ಅಭಿವೃದ್ಧಿಗಾಗಿ ಉತ್ತೇಜಿಸುವ ಅಥವಾ ಪ್ರಚುರಪಡಿಸುವ ದಿಕ್ಕಿನೆಡೆಗೆ ಕೇಂದ್ರಿಕೃತವಾಗಿರುತ್ತದೆ. ಸ್ವಾತಂತ್ರ್ಯಾನಂತರದಿಂದ ಇಂದಿನವರೆಗೆ ಅವ್ಯಾಹತವಾಗಿ ಸಾಗಿ ಬಂದ ಕಾರ್ಯಕ್ರಮಗಳು ಭಾರತದಲ್ಲಿನ ಗ್ರಾಮಗಳನ್ನು ಅಭಿವೃದ್ಧಿ ಪಥದತ್ತ ಕೊಂಡೊಯ್ಯಲು ನಿರಂತರವಾಗಿ ಸಾಗಿವೆ. ಈ ಗ್ರಾಮೀಣ ಅಭಿವೃದ್ಧಿಯು ಸಮಗ್ರ ದೇಶದ ಜನರ ಕಲ್ಯಾಣಕ್ಕಾಗಿ ಯೋಜನೆ ರೂಪಿಸಿಕೊಂಡು ಕೋಟ್ಯಾಂತರ ರೂಪಾಯಿಗಳನ್ನು ಖರ್ಚು ಮಾಡಿ ಜನರ ಸೇವೆ ಮಾಡುವ ಸಂದರ್ಭದಲ್ಲಿ ಸರಕಾರ, ಸ್ವಯಂ ಸೇವಾ ಸಂಘಟನೆಗಳು, ಸೇವಾವರ್ಗ, ಎಲ್ಲರೂ ಸ್ಪಂದಿಸಿ, ಸಹಕಾರ ನೀಡಿ, ಸಂಪನ್ಮೂಲ ಒದಗಿಸಿ ಪ್ರಾಮಾಣಿಕವಾಗಿ ಸ್ಪಂದಿಸಿದಾಗ ಗ್ರಾಮೀಣ ಅಭಿವೃದ್ಧಿಯ ಉದ್ದೇಶ ಸಫಲವಾಗುವುದು.

**ಉದ್ದೇಶಗಳು**

- ಸಾಮಾಜಿಕ ಭದ್ರತೆ ಮತ್ತು ಪಿಂಚಣಿ ಸೌಲಭ್ಯಗಳನ್ನು ತಿಳಿದುಕೊಳ್ಳುವುದು.
- ಸಾಮಾಜಿಕ ಭದ್ರತಾ ಕಾರ್ಯಕ್ರಮಗಳನ್ನು ಭೌತಿಕ ಮತ್ತು ಆರ್ಥಿಕ ಪ್ರಗತಿಯನ್ನು ಮೌಲ್ಯಮಾಪನ ಮಾಡುವುದು.

**ಸಂಶೋಧನಾ ವಿಧಾನ**

ಪ್ರಸ್ತುತ ಅಧ್ಯಯನಕ್ಕೆ ಸಂಬಂಧಿಸಿದಂತೆ ಐತಿಹಾಸಿಕ ದಾಖಲೆಗಳು, ಬರೆಹಗಳು, ಸಾಕ್ಷ್ಯಾಧಾರಗಳು, ದಾಸ್ತಾವೇಜಿನ ಮೂಲಗಳಾದ ದಿನಚರಿಗಳು, ಗ್ರಂಥಗಳು, ಕೈಪಿಡಿಗಳು, ಸಂಯೋಜಿತ ವರದಿಗಳು, ಸಂಶೋಧನಾ ಲೇಖನಗಳು, ದಿನಪತ್ರಿಕೆ ಲೇಖನಗಳು, ವಾರ್ತಾಪತ್ರಿಕೆಗಳು, ಹಸ್ತಪ್ರತಿಗಳು, ಪುಸ್ತಕಗಳು ಹಾಗೂ ಸರ್ಕಾರಿ ಇಲಾಖೆಗಳು ಪ್ರಕಟಿಸುವ ಯೋಜನಾ ಪರಿಚಯ ಪುಸ್ತಕಗಳು ಹಾಗೂ ಕಾರ್ಯ ಸೂಚಿಗಳಿಂದ ಮತ್ತು ಇಲಾಖೆಗೆ ಸಂಬಂಧಿಸಿದ ವ್ಯಕ್ತಿಗಳು ಹಾಗೂ ಅಂತರ್ಜಾಲದಲ್ಲಿ ದೊರೆಯುವ ವಿಷಯಗಳಿಂದ ಮಾಹಿತಿಯನ್ನು ಪಡೆಯಲಾಗಿದೆ.

**ಸಾಮಾಜಿಕ ಭದ್ರತೆ ಮತ್ತು ಪಿಂಚಣಿ ಸೌಲಭ್ಯಗಳ ವಿಷಯಗಳು**

ಕರ್ನಾಟಕ ಸರ್ಕಾರವು ಅಸಹಾಯಕ, ಅಶಕ್ತ ವ್ಯಕ್ತಿಗಳಿಗೆ, ವಿಧವೆಯರಿಗೆ ಅಂಗವಿಕಲರಿಗೆ, ಲಿಂಗತ್ವ ಅಲ್ಪಸಂಖ್ಯಾತರು ಹಾಗೂ ಅವಿವಾಹಿತ/ವಿಚ್ಛೇಧಿತ ಮಹಿಳೆಯರಿಗೆ ಅನೇಕ ಸಾಮಾಜಿಕ ಭದ್ರತೆ ಯೋಜನೆಗಳನ್ನು ಕಂದಾಯ ಇಲಾಖೆಯ ಮೂಲಕ ಅನುಷ್ಠಾನಗೊಳಿಸುತ್ತಿರುತ್ತದೆ. ಈ ಯೋಜನೆಗಳನ್ನು ಇನ್ನೂ ಉತ್ತಮ ರೀತಿಯಲ್ಲಿ ಕಾರ್ಯ ನಿರ್ವಹಿಸುವಂತೆ ಮಾಡಲು ಸಾಮಾಜಿಕ ಭದ್ರತೆ ಮತ್ತು ಪಿಂಚಣಿಗಳ ನಿರ್ದೇಶನಾಲಯವನ್ನು ಕಂದಾಯ ಇಲಾಖೆಯಡಿಯಲ್ಲಿ ಸೃಜಿಸಲಾಗಿದೆ. ನಿರ್ದೇಶನಾಲಯದ ಮುಖ್ಯ ಉದ್ದೇಶವೇನೆಂದರೆ ಸಾಮಾಜಿಕ ಭದ್ರತೆಗಳಿಗೆ ಸಂಬಂಧಪಟ್ಟ ಯೋಜನೆಗಳನ್ನು ಜಾರಿಗೊಳಿಸುವುದಾಗಿರುತ್ತದೆ. ಕಂದಾಯ ಇಲಾಖೆಯ ತಹಶೀಲ್ದಾರ್ ಉಪತಹಶೀಲ್ದಾರ್ ಮಂಜೂರಾತಿ ಅಧಿಕಾರಿಗಳಾಗಿರುತ್ತಾರೆ. ಜಿಲ್ಲಾಧಿಕಾರಿಗಳು ಹಾಗೂ ಪ್ರಾದೇಶಿಕ ಆಯುಕ್ತರುಗಳು ಮೇಲ್ವಿಚಾರಣೆ ಅಧಿಕಾರಿಗಳಾಗಿರುತ್ತಾರೆ.

**2019–20 ನೇ ಸಾಲಿನ ಜನವರಿ ಅಂತ್ಯಕ್ಕೆ ಸಾಧಿಸಿದ ಭೌತಿಕ ಮತ್ತು ಆರ್ಥಿಕ ಪ್ರಗತಿ ವರದಿ ರೂ. ಕೋಟಿಗಳಲ್ಲಿ**

| ಕ್ರ.ಸಂ | ಯೋಜನೆಗಳು | 2020–21 ನೇ ಸಾಲಿನ ಜನವರಿ ಅಂತ್ಯಕ್ಕೆ ಫಲಾನುಭವಿಗಳ ಸಂಖ್ಯೆ | 2020–21ನೇ ಸಾಲಿನಲ್ಲಿ ಬಿಡುಗಡೆಯಾದ ಅನುದಾನ | 2020–21ನೇ ಸಾಲಿನ ಜನವರಿ ಅಂತ್ಯಕ್ಕೆ ಖರ್ಚಾದ ಅನುದಾನ | 2021–22 ಸಾಲಿಗೆ ಬೇಡಿಕೆ ಅನುದಾನ |
|---|---|---|---|---|---|
| **ಮಾಸಿಕ ಪೋಷಣಾ ಭತ್ಯೆ ಯೋಜನೆಗಳು** | | | | | |
| 1. | ಇಂದಿರಾಗಾಂಧಿ ರಾಷ್ಟ್ರೀಯ ವೃದ್ಧಾಪ್ಯ ವೇತನ | 1294562 | 1331.55 | 1041.36 | 226.41 |
| 2. | ನಿರ್ಗತಿಕ ವಿಧವಾ ವೇತನ | 1711834 | 1300.00 | 1077.91 | 82.71 |
| 3. | ಅಂಗವಿಕಲ ವೇತನ ಶೇ 40 ಕ್ಕಿಂತ ಹೆಚ್ಚು ಅಂಗವೈಕಲ್ಯತೆ ಹೊಂದಿರುವ ಫಲಾನುಭವಿಗಳು ಸಂಖ್ಯೆ | 377597 | 1190.00 | 920.8 | 21.53 |
| | ಶೇ.75 ಕ್ಕಿಂತ ಹೆಚ್ಚು ಅಂಗವೈಕಲ್ಯತೆ ಹೊಂದಿರುವ ಫಲಾನುಭವಿಗಳ ಸಂಖ್ಯೆ | 486488 | | | |
| 4. | ಸಂಧ್ಯಾ ಸುರಕ್ಷಾ ಯೋಜನೆ | 2765750 | 3490.00 | 2726.62 | 291.68 |
| 5. | ಮನಸ್ವಿನಿ ಯೋಜನೆ | 125750 | 90.00 | 81.95 | 16.58 |
| 6. | ಮೈತ್ರಿ | 1831 | 1.25 | 1.15 | 0.56 |
| 7. | ಎಂಡೋಸಲ್ಫಾನ್ ಸಂತ್ರಸ್ತರಿಗೆ ಮಿತ ವೇತನ | 6541 | 21.00 | 17.81 | 7.62 |
| 8. | ಸಾಲಭಾದೆಯಿಂದ ಆತ್ಮಹತ್ಯೆ ಮಾಡಿಕೊಂಡ ರೈತ ಪತ್ನಿಯರಿಗೆ ಪರಸ್ಕರಿಸಿದ ವಿಧವಾ ವೇತನ | 4318 | 10.00 | 9.08 | 3.62 |
| 9. | ಆಸಿಡ್ ದಾಳಿಗೆ ಒಳಗಾದ ಮಹಿಳೆಯರಿಗೆ ಸಹಾಯಧನ | 36 | 0.20 | 0.11 | 0.30 |
| **ಇತರೆ ಸಾಮಾಜಿಕ ಭದ್ರತಾ ಯೋಜನೆಗಳು (ಒಂದು ಬಾರಿ ಸಹಾಯಧನ ನೀಡುವ ಯೋಜನೆಗಳು)** | | | | | |
| 10. | ರಾಷ್ಟ್ರೀಯ ಕುಟುಂಬ ನೆರವು ಯೋಜನೆ | 13070 | 40.00 | 26.14 | 186.88 |
| 11. | ಅಂತ್ಯಸಂಸ್ಕಾರ ನೆರವು ಯೋಜನೆ | 19720 | 15.00 | 9.86 | 99.94 |
| 12. | ಆದರ್ಶ ವಿವಾಹ ಯೋಜನೆ | 110 | 0.30 | 0.11 | 1.00 |
| 13. | ಆಮ್‌ಆದ್ಮಿ ಭೀಮಾಯೋಜನೆ/ ಪ್ರಧಾನ ಮಂತ್ರಿ ಜೀವನ್ ಭೀಮಾ ಯೋಜನೆ/ ಪ್ರಧಾನ ಮಂತ್ರಿ ಸುರಕ್ಷಾ ಭೀಮಾ ಯೋಜನೆ | 0 | 5.30 | 0 | 0 |
| **ಒಟ್ಟು** | | | **7494.6** | **5912.9** | **938.83** |

ಮೂಲ : ಕಂದಾಯ ಇಲಾಖೆ ವಾರ್ಷಿಕ ವರದಿ 2020–21.

ಮೇಲಿನ ಕೋಷ್ಟಕವನ್ನು ಗಮನಿಸಿದಾಗ ಹಲವಾರು ಸಾಮಾಜಿಕ ಭದ್ರತಾ ಯೋಜನೆಗಳು ಜಾರಿಗೆ ಬಂದಿರುವುದನ್ನು ಕಾಣಬಹುದಾಗಿದೆ. ಅವುಗಳಲ್ಲಿ ಇಂದಿರಾ ಗಾಂಧಿ ರಾಷ್ಟ್ರೀಯ ವೃದ್ಧಾಪ್ಯ ವೇತನ, ವಿಧವಾ ವೇತನ, ಅಂಗವಿಕಲರ ವೇತನ, ಸಂಧ್ಯಾ ಸುರಕ್ಷಾ ವೇತನ, ಮನಸ್ವಿನಿ ಯೋಜನೆ, ಮೈತ್ರಿಯೋಜನೆ, ಎಂಡೋಸಲ್ಫಾನ್ ಸಂತ್ರಸ್ಥರಿಗೆ ಮಿತ ವೇತನ, ಸಾಲಭಾದೆಯಿಂದ ಆತ್ಮಹತ್ಯೆ ಮಾಡಿಕೊಂಡ ರೈತ ಪತ್ನಿಯರಿಗೆ ಪರಿಷ್ಕರಿಸಿದ ವಿಧವಾ ವೇತನ, ಆಸಿಡ್ ದಾಳಿಗೆ ಒಳಗಾದ ಮಹಿಳೆಯರಿಗೆ ಸಹಾಯ ಧನ, ರಾಷ್ಟ್ರೀಯ ಕುಟುಂಬ ನೆರವು ಯೋಜನೆ, ಅಂತ್ಯಸಂಸ್ಕಾರ ಸಹಾಯಧನ ಯೋಜನೆ, ಆದರ್ಶ ವಿವಾಹ ಯೋಜನೆ, ಆಮ್‌ಆದ್ಮಿ ಭೀಮಾಯೋಜನೆ ಪ್ರಮುಖವಾಗಿದ್ದು, ಈ ಯೋಜನೆಗಳನ್ನು ಸಾಮಾಜಿಕ ಭದ್ರತೆ ಮತ್ತು ಪಿಂಚಣಿ ನಿರ್ದೇಶನಾಲಯವು ಜಾರಿಗೊಳಿಸಿದೆ.

**ಸಾಹಿತ್ಯ ಪರಾಮರ್ಶೆ**

ಶ್ರೀನಿವಾಸ್ ಕಾ.ವೆಂ.(2021) ಅವರು 'ಸರ್ಕಾರದ ಯೋಜನೆಗಳು ಮತ್ತು ಕಾರ್ಯಕ್ರಮಗಳು' ಎಂಬ ಗ್ರಂಥದಲ್ಲಿ ಸರ್ಕಾರದ ಕಾರ್ಯಕ್ರಮಗಳು ಮತ್ತು ಯೋಜನೆಗಳ ಮೌಲ್ಯಮಾಪನವು ಉತ್ತಮ ಆಡಳಿತ ಮತ್ತು ಸಾಕ್ಷ್ಯಾಧಾರಿತ ನೀತಿ ನಿರೂಪಣೆಗೆ ಆಯವ್ಯಯ ಫಲಿತಾಂಶಗಳನ್ನು ಗರಿಷ್ಠಗೊಳಿಸಲು ಒಂದು ಪ್ರಮುಖ ಸಾಧನವಾಗಿರುತ್ತದೆ. ಯೋಜನೆಗಳ ಮೌಲ್ಯಮಾಪನವು ಒಂದು ಚಟುವಟಿಕೆಯ ಯೋಜನೆ, ಕಾರ್ಯಕ್ರಮ, ಕಾರ್ಯತಂತ್ರ, ನೀತಿ, ವಿಷಯ, ಸಂಗತಿ, ಕ್ಷೇತ್ರ, ಕಾರ್ಯಾಚರಣೆಯ ಪ್ರದೇಶ ಅಥವಾ ಸಾಂಸ್ಥಿಕ ಕಾರ್ಯಕ್ಷಮತೆಯ ಸಾಧ್ಯವಾದಷ್ಟು ವ್ಯವಸ್ಥಿತ ಮತ್ತು ನಿಷ್ಪಕ್ಷಪಾತವಾದ ಒಂದು ನಿರ್ಧರಿಸುವಿಕೆಯಾಗಿರುತ್ತದೆ ಎಂದು ತಿಳಿಸಿದ್ದಾರೆ.

ಯೋಜನೆ, ಕಾರ್ಯಕ್ರಮ ಸಂಯೋಜನೆ ಮತ್ತು ಸಾಂಖ್ಯಿಕ ಇಲಾಖೆ, ಕರ್ನಾಟಕ ಸರ್ಕಾರ (2021) ಪ್ರಕಟಿಸಿರುವ 'ಕರ್ನಾಟಕ ಆರ್ಥಿಕಸಮೀಕ್ಷೆ 2020–21' ವರದಿಯಲ್ಲಿ ಮಾನವ ಅಭಿವೃದ್ಧಿ ಫಲಿತಾಂಶಗಳನ್ನು ಸುಧಾರಿಸುವ ಉದ್ದೇಶದಿಂದ ನಿಯೋಜಿಸಲಾದ ನಿಧಿಗಳ ಎದುರು ಮಾನವ ಅಭಿವೃದ್ಧಿ ಸೂಚಕಗಳನ್ನು ನಿಯತಕಾಲಿಕವಾಗಿ ಮೇಲ್ವಿಚಾರಣೆ ಮಾಡಲು ಅಭಿವೃದ್ಧಿ ಯೋಜನೆಗಳ ಅನುಷ್ಠಾನಕ್ಕೆ ಉತ್ಪಾದಿಸುತ್ತದೆ. ಕರ್ನಾಟಕ ಸರ್ಕಾರವು ಇದನ್ನು ಸುಸ್ಥಿರ ಅಭಿವೃದ್ಧಿ ಗುರಿಗಳ ಸೂಚಕಗಳೊಂದಿಗೆ ಜೋಡಿಸುತ್ತಿದೆ ಹಾಗೂ ಉತ್ತಮ ಅಭಿವೃದ್ಧಿ ಫಲಿತಾಂಶಗಳಿಗಾಗಿ ಮತ್ತು 2030ರ ವೇಳೆಗೆ ಸುಸ್ಥಿರ ಅಭಿವೃದ್ಧಿ ಗುರಿಗಳನ್ನು ಸಾಧಿಸಲು ದತ್ತಾಂಶ ವಿಶ್ಲೇಷಣಾ ಅನ್ವಯಿಕೆಗಳನ್ನು ಅಭಿವೃದ್ಧಿಪಡಿಸುತ್ತಿದೆ. ಈ ಉದ್ದೇಶಕ್ಕಾಗಿ, ಮುಕ್ತ ದತ್ತಾಂಶ ಸಂಶೋಧನಾ ಕೇಂದ್ರದಂತಹ ಮೀಸಲಾದ ಸಂಸ್ಥೆಯ ಮೂಲಕ ಅಂತರಾಷ್ಟ್ರೀಯ ಮಾಹಿತಿ ತಂತ್ರಜ್ಞಾನ ಸಂಸ್ಥೆ ಬೆಂಗಳೂರು ಮತ್ತು ಸಾರ್ವಜನಿಕ ವ್ಯವಹಾರ ಕೇಂದ್ರದಂತಹ ವಿಶೇಷ ಶೈಕ್ಷಣಿಕ ಸಂಸ್ಥೆಗಳಿಂದ ಯೋಜನೆ, ಕಾರ್ಯಕ್ರಮ ಸಂಯೋಜನೆ ಮತ್ತು ಸಾಂಖ್ಯಿಕ ಇಲಾಖೆಗೆ ಸಹಾಯದ ಅಗತ್ಯವಿದೆ ಎಂಬುದಾಗಿ ಈ ವರದಿ ತಿಳಿಸುತ್ತದೆ.

ಕೃಷ್ಣಯ್ಯಗೌಡ, ಹೆಚ್.ಆರ್ (2016) 'ಸುಸ್ಥಿರ ಅಭಿವೃದ್ಧಿಯ ಗುರಿಗಳು' ಎಂಬ ಕೃತಿಯಲ್ಲಿ ಸಹಸ್ರಮಾನ ಅಭಿವೃದ್ಧಿ ಗುರಿಗಳು (ಮಿಲೇನಿಯಂ ಡೆವಲಪ್‌ಮೆಂಟ್ ಗೋಲ್ಸ್–ಎಂಡಿಜಿ) 2015ರ ವೇಳೆಗೆ ವಿಶ್ವದಾದ್ಯಂತ ಸಾಧಿಸಬೇಕಾದ ಅಭಿವೃದ್ಧಿ ಗುರಿಗಳು ಮತ್ತು ಆದ್ಯತೆಗಳನ್ನು ಕುರಿತು ಒಂದು ಐತಿಹಾಸಿಕ ಪ್ರಯತ್ನವಾಗಿತ್ತು. ಸಹಸ್ರಮಾನ ಅಭಿವೃದ್ಧಿ ಗುರಿಗಳ ಯುಗ ಅಂತ್ಯಕ್ಕೆ ಬರುತ್ತಿದ್ದಂತೆ, ವಿಶಾಲವಾದ ತಳಹದಿಯನ್ನಾಧರಿಸಿದ ಮತ್ತು ಸಬಲವಾದ ನವೀನ ಮಾರ್ಗಗಳನ್ನು ಆರಿಸಿಕೊಂಡು ಸುಸ್ಥಿರ ಅಭಿವೃದ್ಧಿಯನ್ನು ಸಾಧಿಸುವ ಉದ್ದೇಶವನ್ನು ಹೊಂದಿರುವ 2030ರ ಕಾರ್ಯಸೂಚಿ 2016ರಲ್ಲಿ ಮುನ್ನೆಲೆಗೆ ಬಂದಿತು. ಈ ಕಾರ್ಯಸೂಚಿಯು ಸುಸ್ಥಿರ ಅಭಿವೃದ್ಧಿಯ ವಿವಿಧ ಹಂತದ ಸಾಮಾಜಿಕ, ಆರ್ಥಿಕ ಮತ್ತು ನೈಸರ್ಗಿಕ ಆಯಾಮಗಳನ್ನು

ಒಳಗೊಂಡಿರುವ ಹಲವು ಅಂಶಗಳ ಬೆಸುಗೆಯನ್ನು ಗುರುತಿಸಿದೆ. ಸುಸ್ಥಿರ ಅಭಿವೃದ್ಧಿ ಗುರಿಗಳು ಯುಎನ್ ಜನರಲ್ ಅಸೆಂಬ್ಲಿ 2030ರ ಕಾರ್ಯಸೂಚಿಯ ಭಾಗವಾಗಿದ್ದು, ಇವುಗಳನ್ನು ಸಾಧಿಸಲು ಸಮಗ್ರ ಸಾಕ್ಷ್ಯ ಆಧಾರಿತ ಚೌಕಟ್ಟಿನಲ್ಲಿ 17 ವಿವಿಧ ಗುರಿಗಳು, 169 ಉದ್ದೇಶಿತ ಲಕ್ಷಣಗಳು ಹಾಗೂ 232 ಸೂಚಕಗಳನ್ನು ಒದಗಿಸಲಾಗಿದೆ ಎಂಬುದಾಗಿ ಈ ಗ್ರಂಥದಲ್ಲಿ ಕಾಣಬಹುದಾಗಿದೆ.

ಕಂದಾಯ ಇಲಾಖೆಯ 2020-21ರ ವಾರ್ಷಿಕ ವರದಿಯಲ್ಲಿ ಸಾಮಾಜಿಕ ಭದ್ರತಾ ಯೋಜನೆಯ ಹಿನ್ನೆಲೆಯನ್ನು ಹಾಗೂ ವಿವರಣೆಯನ್ನು ನೀಡಲಾಗಿದೆ. 1880ನೇ ಇಸವಿಯಲ್ಲಿ ಚಾನ್ಸೆಲರ್ ಆಟೋವನ್ ಬಿಸ್ಮಾರ್ಕ್, ಜರ್ಮನಿಯ ದುರ್ಬಲ ಹಾಗೂ ಅಸಹಾಯಕ ಜನತೆಗಾಗಿ ಸಾಮಾಜಿಕ ವಿಮಾ ಕಾರ್ಯಕ್ರಮಗಳನ್ನು ಜಾರಿಗೆ ತಂದರು. ಬೇರೆ ಯೂರೋಪಿಯನ್ ದೇಶಗಳು ತಮ್ಮ ಜನತೆಯ ಏಳಿಗೆಗಾಗಿ ಈ ಕಾರ್ಯಕ್ರಮಗಳನ್ನು ಅಳವಡಿಸಿಕೊಂಡವು. ತದನಂತರ ಅಮೆರಿಕ ಸಂಯುಕ್ತ ಸಂಸ್ಥಾನದ ಅಧ್ಯಕ್ಷ ಫ್ರಾಂಕ್ಲಿನ್ ರೂಸ್ ವೆಲ್ಟ್, ಸಾಮಾಜಿಕ ಭದ್ರತಾ ಕಾನೂನನ್ನು 1935ನೇ ಇಸವಿಯಲ್ಲಿ ದೇಶವನ್ನು ಅತ್ಯಂತ ವಿಷಮ ಆರ್ಥಿಕ ಸಂಕಷ್ಟದಿಂದ (ದಿ ಗ್ರೇಟ್ ಡಿಪ್ರೆಷನ್) ಪಾರು ಮಾಡಲು ಜಾರಿಗೆ ತಂದರು. ಕರ್ನಾಟಕ ರಾಜ್ಯ ಸರ್ಕಾರವು ಅಶಕ್ತ ವೃದ್ಧರ ರಕ್ಷಣೆಗಾಗಿ 1965ನೇ ಇಸವಿಯಲ್ಲಿ ರೂ. 40/- ರಂತೆ ಮಾಸಿಕ ಪಿಂಚಣಿಯನ್ನು ನೀಡುತ್ತಾ ಬಂದಿದೆ. ಅಲ್ಲದೆ ಅಂಗವಿಕಲರ ಸಾಮಾಜಿಕ ಭದ್ರತೆಗಾಗಿ 1979ರಲ್ಲಿ ಹಾಗೂ ನಿರ್ಗತಿಕ ವಿಧವೆಯರ ರಕ್ಷಣೆಗಾಗಿ 1984ರಲ್ಲಿ ರೂ.40/-ರಂತೆ ಮಾಸಿಕ ಪಿಂಚಣಿಯನ್ನು ಜಾರಿಗೆ ತಂದಿದೆ. ಪ್ರಸ್ತುತ ಕರ್ನಾಟಕ ಸರ್ಕಾರವು ಅಸಹಾಯಕ, ಅಶಕ್ತ ವ್ಯಕ್ತಿಗಳಿಗಾಗಿ ಹಾಗೂ ನಿರ್ಗತಿಕ ವಿಧವೆಯರಿಗೆ ಮತ್ತು ಅಂಗವಿಕಲರಿಗೆ ಅನೇಕ ಸಾಮಾಜಿಕ ಭದ್ರತೆ ಯೋಜನೆಗಳನ್ನು ತಾಲೂಕು ಮಟ್ಟದಲ್ಲಿ ಕಾರ್ಯಗತಗೊಳಿಸುತ್ತಿದ್ದಾರೆ.

ಕರ್ನಾಟಕದಲ್ಲಿ ನೇರ ಲಾಭ ವರ್ಗಾವಣೆಯ ಸ್ಥಿತಿ ಮತ್ತು ಅದರ ಕಾರ್ಯಕ್ಷಮತೆ ಕುರಿತು ಅಧ್ಯಯನ (202) ಎಂಬ ಅಧ್ಯಯನವು 'ಮಾನವನ ಬಡತನವನ್ನು ಹೋಗಲಾಡಿಸಲು ಷರತ್ತುಬದ್ಧ ನಗದು ವರ್ಗಾವಣೆ ಯೋಜನೆಗಳು ಅಗತ್ಯವಿದೆ' ಎಂದು ಹೇಳಿದೆ. ಷರತ್ತುಬದ್ಧ ನಗದು ವರ್ಗಾವಣೆ ಯೋಜನೆಗಳನ್ನು ಔಪಚಾರಿಕವಾಗಿ ಇರಿಸಲಾಗಿದ್ದು, ಸಾರ್ವಜನಿಕವಾಗಿ ಒದಗಿಸಲಾದ ಸುರಕ್ಷತಾ ನಿವ್ವಳ ಕಾರ್ಯಕ್ರಮಗಳು ಅಗತ್ಯವಿರುವವರಿಗೆ ಹಣವನ್ನು ಪೂರೈಸುತ್ತವೆ ಮತ್ತು ಆರ್ಥಿಕ ಬಿಕ್ಕಟ್ಟಿನ ಅವಧಿಯಲ್ಲಿ ಅವರಿಗೆ ಸಹಾಯ ಮಾಡುತ್ತವೆ. ಅಂತಹ ಕಾರ್ಯಕ್ರಮಗಳ ಆರಂಭಿಕ ಪ್ರಗತಿಯನ್ನು 1997 ರಲ್ಲಿ ಮೆಕ್ಸಿಕೋದಲ್ಲಿ ಆರೋಗ್ಯ, ಶಿಕ್ಷಣ ಮತ್ತು ಪೋಷಣೆಯಲ್ಲಿ ಮಧ್ಯಸ್ಥಿಕೆಯನ್ನು ಸಂಯೋಜಿಸುವ ಹೊಸ ವಿಧಾನದೊಂದಿಗೆ ಪ್ರಾರಂಭಿಲಾಯಿತು.

ಕರ್ನಾಟಕ ಮೌಲ್ಯಮಾಪನ ಪ್ರಾಧಿಕಾರ, ಯೋಜನೆ, ಕಾರ್ಯಕ್ರಮ ನಿರ್ವಹಣೆ ಮತ್ತು ಸಾಂಖ್ಯಿಕ ಇಲಾಖೆಯ ಅಕ್ಟೋಬರ್-2020 ರ ವರದಿಯಲ್ಲಿ 'ಭಾರತ ಸಂವಿಧಾನದ ನಿರ್ದೇಶಿತ ತತ್ವ (Directive Principle)ದ 41 ಹಾಗೂ 42 ನೇ ವಿಧಿಯು ಅಸಹಾಯಕ, ಅಶಕ್ತ ಹಾಗೂ ದುರ್ಬಲ ವರ್ಗದವರ ರಕ್ಷಣೆಯು ಕೇಂದ್ರ ಹಾಗೂ ರಾಜ್ಯ ಸರ್ಕಾರಗಳ ಸಮವರ್ತಿ ಹೊಣೆಯೆಂದು ಹೇಳುತ್ತದೆ. ನಿರ್ದಿಷ್ಟವಾಗಿ 41ನೇ ಅನುಚ್ಛೇದದಂತೆ ವೃದ್ಧರು, ಅನಾರೋಗ್ಯದಿಂದನರಳುತ್ತಿರುವವರು, ಅಂಗವಿಕಲರು, ನಿರುದ್ಯೋಗಿಗಳು ಹಾಗೂ ಇತರೇ ಕಾರಣಗಳಿಂದ ಬಡತನದ ಬವಣೆಯಲ್ಲಿರುವವರಿಗೆ ತನ್ನ ಆರ್ಥಿಕ ಸಾಮರ್ಥ್ಯದೊಳಗೆ ನೆರವು ನೀಡುವುದು ಹಾಗೂ ಅವರ ಸಾಮಾಜಿಕ ಸ್ಥಿತಿಯಲ್ಲಿ ಸುಧಾರಣೆ ತರುವುದು ರಾಜ್ಯ ಸರ್ಕಾರದ ಆದ್ಯ ಕರ್ತವ್ಯವಾಗಿರುತ್ತದೆ. ಬಡತನ, ನಿರ್ಗತಿಕತೆ ಹಾಗೂ ಅನಿಶ್ಚಿತ ಪರಿಸ್ಥಿತಿಗಳನ್ನು ನಿಭಾಯಿಸಲು ಸಮಾಜದಲ್ಲಿ ಬವಣೆಗೆ ತುತ್ತಾಗುವ ಜನ ಸಮುದಾಯಕ್ಕೆ ರಕ್ಷಣೆಯನ್ನು ಹಾಗೂ ಸಾಮಾಜಿಕ ನ್ಯಾಯವನ್ನು

ನಿರಂತರವಾಗಿ ಒದಗಿಸುವುದು ಸರ್ಕಾರಕ್ಕೆ ಅನಿವಾರ್ಯವಾಗುತ್ತಲೇ ಹೋಗುತ್ತದೆ.

ಇಂಟರ್ನ್ಯಾಷನಲ್ ಲೇಬರ್ ಆರ್ಗನೈಸೇಷನ್ (ILO) ಸಾಮಾಜಿಕ ಭದ್ರತೆಯನ್ನು ಈ ರೀತಿಯಲ್ಲಿ ವ್ಯಾಖ್ಯಾನಿಸುತ್ತದೆ "ಸಮಾಜವು ಸೂಕ್ತವಾದ ಸಂಸ್ಥೆಗಳ ಮೂಲಕ, ವಿಪತ್ತುಗಳನ್ನು ಎದುರಿಸಬೇಕಾಗಿ ಬರುವ ತನ್ನ ಸದಸ್ಯರಿಗೆ ಕೊಡಮಾಡುವ ಭದ್ರತೆ. ಈ ವಿಪತ್ತುಗಳ ಮೂಲಭೂತವಾಗಿ ಆಕಸ್ಮಿಕವಾಗಿದ್ದು, ಅವುಗಳನ್ನು ಆ ಸದಸ್ಯರು ಸ್ವಂತ ಸಾಧನ, ಸಾಮರ್ಥ್ಯದಿಂದ ವ್ಯಕ್ತಿಗತ ಅಥವಾ ಅಂಥ ವ್ಯಕ್ತಿಗಳ ಖಾಸಗೀ ಸಮೂಹದಿಂದ ಪರಿಹರಿಸಿಕೊಳ್ಳಲು ಸಾಧ್ಯವಾಗುವುದಿಲ್ಲ." ಬಡವರು ಮತ್ತು ಜಾತಿವ್ಯವಸ್ಥೆಯಿಂದಾಗಿ ಪರಂಪರಾಗತವಾಗಿ ತಾರತಮ್ಯಕ್ಕೆ ಒಳಗಾಗಿರುವ ಜನರಿಗೆ ಸಮಾಜದಲ್ಲಿ ಬೆಳೆಯಲು ಸಮಾನವಾದ ಅವಕಾಶವನ್ನು ಕಲ್ಪಿಸಿ ಸಾಮಾಜಿಕ ಭದ್ರತೆಯನ್ನು ನೀಡುವುದು ಭಾರತ ಕಲ್ಯಾಣ ರಾಷ್ಟ್ರದ ಬದ್ಧತೆಗಳಲ್ಲಿ ಒಂದಾಗಿದೆ.

**ಸಾರಾಂಶ**

ಒಟ್ಟಾರೆಯಾಗಿ ಸಾಮಾಜಿಕ, ಆರ್ಥಿಕ ಅಸಮಾನತೆಯಿಂದ ಬಳಲುತ್ತಿರುವ ಹಾಗೂ ದುರ್ಬಲ ಸಮುದಾಯಗಳ ಜೀವನೋಪಾಯಕ್ಕೆ ಸಾಮಾಜಿಕ ಭದ್ರತೆ ಯೋಜನೆಗಳು ಅನುಕೂಲಕರವಾಗಿವೆ. ಮನಸ್ವಿನಿ, ಮೈತ್ರಿ, ಸಂಧ್ಯಾಸುರಕ್ಷ, ವಿಧವಾವೇತನ, ಅಂಗವಿಕಲವೇತನ, ಮತ್ತೀತರ ಕಲ್ಯಾಣ ಕಾರ್ಯಕ್ರಮಗಳು ಹಾಗೂ ಪ್ರಸ್ತುತ ಕರ್ನಾಟಕ ಜಾರಿಗೆ ತಂದಿರುವ ಗ್ಯಾರಂಟಿ ಯೋಜನೆಗಳು ಬಡಜನರ ಸುಧಾರಣೆ, ಗ್ರಾಮೀಣ ಪ್ರದೇಶದ ಸಬಲೀಕರಣಕ್ಕೆ ಅನುಕೂಲವಾಗುತ್ತದೆ.

**ಪರಾಮರ್ಶನ ಗ್ರಂಥಗಳು**


- ಅಹುಜಾ, ಆರ್. (1999). *ಭಾರತದಲ್ಲಿ ಸಾಮಾಜಿಕ ಸಮಸ್ಯೆಗಳು.* ರಾವತ್ ಪಬ್ಲಿಕೇಷನ್.
- ಗೋಕುಲೇಶ್ ಶರ್ಮ. (1997). *ಮಾನವ ಹಕ್ಕುಗಳು ಮತ್ತು ಸಾಮಾಜಿಕ ನ್ಯಾಯಗಳು.* ಡೀಪ್ ಮತ್ತು ಡೀಪ್ ಪಬ್ಲಿಕೇಷನ್ಸ್ ಪ್ರೈ ಲಿಮಿಟೆಡ್.
- *ಕರ್ನಾಟಕ ಆರ್ಥಿಕ ಸಮೀಕ್ಷೆ. (2020–21).* ಯೋಜನೆ, ಕಾರ್ಯಕ್ರಮ ಸಂಯೋಜನೆ ಮತ್ತು ಸಾಂಖ್ಯಿಕ ಇಲಾಖೆ, ಕರ್ನಾಟಕ ಸರ್ಕಾರ.
- ಕೃಷ್ಣಯ್ಯಗೌಡ, ಹೆಚ್.ಆರ್. (2016). *ಸುಸ್ಥಿರ ಅಭಿವೃದ್ಧಿಯ ಗುರಿಗಳು.* ಭಾರತಿ ಪ್ರಕಾಶನ.
- ಕಿಶನ್ ಜಿಂದಾಲ್. (2020). *ಕರ್ನಾಟಕದಲ್ಲಿ ನೇರ ಲಾಭ ವರ್ಗಾವಣೆಯ ಸ್ಥಿತಿ ಮತ್ತು ಅದರ ಕಾರ್ಯಕ್ಷಮತೆ ಕುರಿತು ಅಧ್ಯಯನ.* ಕರ್ನಾಟಕ ಸರ್ಕಾರ.
- ರಾಮ್ ಕೆ ನವರತ್ನ. (2022). *ಕಾರ್ಮಿಕ ಕಾನೂನು ಕಲ್ಯಾಣ ಮತ್ತು ಶಿಕ್ಷಣ.* ವಂದನಾ ಪಬ್ಲಿಕೇಷನ್ಸ್,
- ಶ್ರೀನಿವಾಸ್, ಕಾ.ವೆಂ. (2021). *ಸರ್ಕಾರದ ಯೋಜನೆಗಳು ಮತ್ತು ಕಾರ್ಯಕ್ರಮಗಳು.* ಉನ್ನತಿ ಪ್ರಕಾಶನ.
- *ವಾರ್ಷಿಕ ವರದಿ (2020–21).* ಕಂದಾಯ ಇಲಾಖೆ, ಕರ್ನಾಟಕ ಸರ್ಕಾರ.